# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ | ನೋಂದಣಿ ಸಂಖ್ಯೆ : KARBIL / 2005 / 16123 | ಸಪ್ಟಂಬರ್- 2014 | ಸಂಚಿಕೆ ೯


**ಶ್ರೀ ಸಭಾದ ಮುಂದಿನ ಕಾರ್ಯಕ್ರಮ : ತಾರೀಕು 12–10–2014ರಂದು 'ನಾಡಹಬ್ಬ' ಆಚರಣೆ**

# 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ'

***"ಧರ್ಮಾಚರಣೆಯಿಂದ ಮಾತ್ರ ಜೀವನ ಸಾರ್ಥಕ" – ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು***





ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಚಾತುರ್ಮಾಸ ಕೈಗೊಂಡ ಸಮಯದಲ್ಲಿ ಸ್ಥಾನಿಕ ಸಮಾಜ ಬಾಂಧವರು ಒಟ್ಟಾಗಿ ತೆರಳಿ ಗುರುಗಳ ದರ್ಶನ, ಆಶೀರ್ವಚನ ಪಡೆದು ಹೊರೆಕಾಣಿಕೆ ನೀಡಿ ಫಲ ಮಂತ್ರಾಕ್ಷತೆ ಪಡೆದು ಧನ್ಯರಾಗಿ ಬರುವಂತಹ ಕ್ರಮ ಕಳೆದ ಹಲವಾರು ವರ್ಷಗಳಿಂದ ನಡೆದು ಬಂದಿರುವ ಸಂಪ್ರದಾಯ. ಗುರುವರ್ಯರು ಮುಂಬೈ, ಚೆನ್ನೈಗಳಲ್ಲಿ ಚಾತುರ್ಮಾಸ ಕೈಗೊಂಡಾಗಲೂ ಸ್ಥಾನಿಕ ಸಮಾಜದವರು ಭಕ್ತಿಪೂರ್ವಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ತೆರಳಿ ತಮ್ಮ ಗುರುಭಕ್ತಿಯನ್ನು ಮೆರೆದಿದ್ದರು. ಈ ಬಾರಿ ಶ್ರೀ ಸುಬ್ರಹ್ಮಣ್ಯ ಸಭಾದಿಂದ ದಿನಾಂಕ 24–08–2014ರಂದು ಒಂದು ಬಸ್ಸು ಹಾಗೂ ಒಂದು ಮಿನಿಬಸ್ಸುಗಳಲ್ಲಿ ಹೊರೆಕಾಣಿಕೆಯನ್ನು ಹೇರಿಕೊಂಡು ಸುಮಾರು 85ರಷ್ಟು ಭಕ್ತರು ಬೆಳಗ್ಗೆ ಗಂಟೆ 6–30ಕ್ಕೆ ಶ್ರೀ ಸಭಾದಿಂದ ಹೊರಟರು. ಮಿನಿಬಸ್ಸು ಶ್ರೀ ಕರುಣ್ ರಾವ್ ಬೆಳ್ಳೆಯವರ ನೇತೃತ್ವದಲ್ಲಿ ಸಮಾಜ ಬಾಂಧವರನ್ನು ದಾರಿಯಲ್ಲಿ ಹತ್ತಿಸಿಕೊಂಡು ಸಾಗಿದರೆ ಉಳಿದವರು ಶ್ರೀ ಅನಿಲ್ ರಾವ್ ಬಿ. ಎಸ್. ನೇತೃತ್ವದಲ್ಲಿ ಇನ್ನೊಂದು ಬಸ್ಸಿನಲ್ಲಿ ತೆರಳಿದರು. ಸಮಯ ಕಳೆಯುವುದಕ್ಕಾಗಿ ಸರದಿಯಂತೆ ಭಕ್ತಿಗೀತೆ ಕಾರ್ಯಕ್ರಮ ನಡೆಸಿಕೊಡಲು ವಿನಂತಿಸಿದಾಗ ಉತ್ಸಾಹದಿಂದ ಸದಸ್ಯರು ಮುಂದೆ ಬಂದು ಸೊಗಸಾಗಿ ಭಕ್ತಿಗೀತೆಗಳನ್ನು ಹಾಡಿದರು. ಭಕ್ತಿಗೀತೆಯಲ್ಲಿ ಸದಸ್ಯರು ಎಷ್ಟು ತನ್ಮಯರಾದರೆಂದರೆ ಕಾಫಿ, ತಿಂಡಿಗಾಗಿ ಬಸ್ಸು ನಂದಿಕೂರು ಶ್ರೀ ಜನಾರ್ದನ ರಾಯರ ಮನೆಯಲ್ಲಿ ನಿಲ್ಲಿಸದೇ ಸುಮಾರು 1 ಕಿ.ಮೀ. ಮುಂದೆ ಚಲಿಸಿ ಆಗಿತ್ತು. ಮತ್ತೆ ಹಿಂದೆ ಬಂದು ಶ್ರೀ ಜನಾರ್ದನ ರಾಯರ ಮನೆಗೆ ತಲುಪಿದಾಗ ಅವರು ಹಾಗೂ ಅವರ ಮನೆಯವರು ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿ ಸಕಲ ವ್ಯವಸ್ಥೆಯನ್ನು ಮಾಡಿಕೊಟ್ಟರು. ಭರ್ಜರಿ ಇಡ್ಲಿ, ಸಾಂಬಾರ್, ಚಟ್ನಿ, ಶೀರ ಸವಿದ ಸದಸ್ಯರು ಚಾ, ಕಾಫಿ ಕುಡಿದು ಉತ್ಸುಕತೆಯನ್ನು ತುಂಬಿಕೊಂಡರು. ಮನೆಯವರಿಗೆ ಕೃತಜ್ಞತೆ ಸಲ್ಲಿಸಿ ಮುಂದುವರಿದ ಪ್ರಯಾಣವು ಭಕ್ತಿಗೀತೆ, ಹಾಸ್ಯ, ಅನುಭವದ ಮಾತು ಧ್ವನಿವರ್ಧಕದಲ್ಲಿ ಮಾರ್ದನಿಸಿತು. ಸುಮಾರು 10–30ಕ್ಕೆ ಶೃಂಗೇರಿ ತಲುಪಿದಾಗ ಯುವ ವೇದಿಕೆಯ ಕಾರ್ಯದರ್ಶಿ ಶ್ರೀ ಸುರೇಶ್ ಕಡಬ ಇವರು ತಮ್ಮ ತಂಡದೊಂದಿಗೆ ಹೊರೆಕಾಣಿಕೆಯನ್ನು ಗುರುಸದನಕ್ಕೆ ಮುಟ್ಟಿಸುವ ಹೊಣೆ ಹೊತ್ತರು. ಇತರರು ಶೃಂಗೇರಿ ಶಾರದಾಂಬೆಯ ದರ್ಶನಕ್ಕಾಗಿ ತೆರಳಿದರು. ಮತ್ತೆ ಎಲ್ಲರೂ ಗುರು ಸದನಕ್ಕೆ ತಲುಪಿದಾಗ ಗುರುಗಳು ಅದಾಗಲೇ ಆಸೀನರಾಗಿ ಭಕ್ತರಿಗೆ ದರ್ಶನ ನೀಡುತ್ತಿದ್ದರು. ಹಲವು ಊರುಗಳಿಂದ ಬಂದಿರುವ ಸಮಾಜ ಬಾಂಧವರು ಸಂತೋಷ, ಉಲ್ಲಾಸದಿಂದ ತಮ್ಮ ತಮ್ಮ ಬಂಧುಗಳೊಡನೆ ಉಭಯ ಕುಶಲೋಪರಿಯಲ್ಲಿ ನಿರತರಾಗುತ್ತಾ ಗುರುಗಳ ಆಶೀರ್ವಚನಕ್ಕಾಗಿ ಭಕ್ತಿಯಿಂದ ಕಾಯತೊಡಗಿದರು. ಮುಂದೆ ಚಂದ್ರಮೌಳೀಶ್ವರ ದೇವರಿಗೆ ಆರತಿ ಬೆಳಗುತ್ತಿದ್ದಂತೆ ನೆರೆದಿದ್ದ ಭಕ್ತರು ಶ್ರದ್ಧೆಯಿಂದ ಪೂಜೆ ವೀಕ್ಷಿಸುತ್ತಾ ಧನ್ಯರಾದರು. ಪೂಜೆಯ ಬಳಿಕ ಆಶೀರ್ವಚನ ನೀಡುತ್ತಾ ಶ್ರೀ ಗುರುಗಳು 'ಸಂಪತ್ತು ಗಳಿಸುವುದರಿಂದ, ಹೆಸರು ಮಾಡುವುದರಿಂದ ಯಶಸ್ಸು ಪ್ರಾಪ್ತಿಯಾಗುತ್ತದೆ ಎಂದು ಕೆಲವರು ತಿಳಿದಿದ್ದಾರೆ. ಆದರೆ ಅಂತಹ ಯಶಸ್ಸು ಕೇವಲ ತಾತ್ಕಾಲಿಕ. ಕೇವಲ ಧರ್ಮಾಚರಣೆಯಿಂದ ಮಾತ್ರ ಮನುಷ್ಯ ಸುಖ, ಸಂತೃಪ್ತಿ ಪಡೆಯುತ್ತಾನೆ. ಶಂಕರ ಭಗವತ್ಪಾದರು ಸಹ ಇದನ್ನೇ ನಮಗೆ ಬೋಧಿಸಿದ್ದಾರೆ. ಹಾಗಾಗಿ ನೀವೆಲ್ಲರೂ ಧರ್ಮಾಚರಣೆಯನ್ನು ನಡೆಸಿಕೊಂಡು ಬಂದರೆ ನನಗೆ ಪರಮ ಸಂತೋಷವಾಗುತ್ತಿದೆ. ನಿಮ್ಮಿಂದ ಬೇರೆ ಯಾವುದೇ ಕಾಣಿಕೆಯನ್ನು ನಾನು ಅಪೇಕ್ಷಿಸುವುದಿಲ್ಲ' ಎಂದು ಅವರು ತಿಳಿಸಿದರು.

***ಮೂರನೇ ಪುಟಕ್ಕೆ***

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್**
**ಬಿಜೈ ರಸ್ತೆ, ಮಂಗಳೂರು**

ಸಮಾಜ ಬಾಂಧವರೇ,


**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ**
**ದಿನಾಂಕ 12-10-2014ನೇ ಆದಿತ್ಯವಾರದಂದು**

**ನಾಡಹಬ್ಬವನ್ನು**

ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ
ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

## ಕಾರ್ಯಕ್ರಮಗಳು



ಬೆಳಗ್ಗೆ 9-30ರಿಂದ : **ಲಲಿತಾ ಸಹಸ್ರನಾಮ ಪಾರಾಯಣ**
10-00ರಿಂದ 11-00 : **ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ**
(ಪ್ರಾಯೋಜಕರು : ಶ್ರೀ ಕೂಡ್ಲು ವೇಣುಗೋಪಾಲ ಶ್ಯಾನುಭೋಗ್)
11-00ರಿಂದ 11-30 : **ಛದ್ಮವೇಷ ಸ್ಪರ್ಧೆ** – ವಿಭಾಗ : 1ರಿಂದ 5 ವರ್ಷ - 6ರಿಂದ 10 ವರ್ಷ
11-30ರಿಂದ 12-30 : ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ದಶಮಾನೋತ್ಸವ ಕಾರ್ಯಕ್ರಮ
10-30ರಿಂದ 12-30 : **ಚಿತ್ರ ಬಿಡಿಸುವ ಸ್ಪರ್ಧೆ** – ವಿಭಾಗ : 1ರಿಂದ 5ನೇ ತರಗತಿ - 6ರಿಂದ 10ನೇ ತರಗತಿ
12-30ರಿಂದ 1-00 : **ಪ್ರತಿಭಾ ಪುರಸ್ಕಾರ**
ದಿ| ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಯಾ ಇವರಿಂದ
ನಿರ್ವಹಣೆ : ಶ್ರೀ ಕೆ. ಸದಾಶಿವ ಶಾಸ್ತ್ರಿ
ಮಧ್ಯಾಹ್ನ 1-00ರಿಂದ : **ಭೋಜನ**
2-00ರಿಂದ : **ಯಕ್ಷಗಾನ**
ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ಸದಸ್ಯರಿಂದ ಹಾಗೂ ಅತಿಥಿ ಕಲಾವಿದರಿಂದ
(ಪ್ರಾಯೋಜಕರು : ಶ್ರೀಮತಿ ಪುಷ್ಪಲತಾ ಬಿ. ರಾವ್)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :** ಶ್ರೀಮತಿ ಅರುಣಾ ಸೋಮಶೇಖರ್ : **9880413243, 2452860 (R)**
ಶ್ರೀ ವಿದ್ಯಾರಣ್ಯ ಕೆ. : **9686201277**
ಶ್ರೀಮತಿ ಶೈಲಜಾ ಶ್ರೀಕಾಂತ್ : **9341446255, 2495929 (R)**

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**




## ಇರಲಿ ಬಿಡು

**– ಸ್ವಾತಿ ಪ್ರಮೋದ್ ಕ್ಯಾದಿಗೆ, ಮಂಗಳೂರು**

ನೊಂದವರ ಮನದಲ್ಲಿ
ಚಿಗುರುವುದೇ ಆಸೆ?
ಬರಡಾದ ಮನದಲ್ಲಿ
ಬರಬಹುದೆ ಭರವಸೆಯು?

ಹುರುಪಿಲ್ಲದ ಮನಕೆ ಸ್ಫೂರ್ತಿ ಕೊಡುವವರ್ಯಾರು?
ಹೆತ್ತವರು ಬಿಟ್ಟು ಬೇರಾರು ಕೊಡಲಾಗದು
ಹೆತ್ತವರೇ ಹೋಗೆಂದು ನೂಕಿದರೆ ಏನು?
ನೀನ್ಯಾರೆಂದು ಒಮ್ಮೆ ನೀಂ ನಿನ್ನೊಳಗೆ ಕೇಳು.

ಸ್ಥಾನಮಾನಕ್ಕಾಗಿ ಮಾಡದಿರು ಹೋರಾಟ
ಅದರಿಂದ ನೀ ಅನುಭವಿಸುವೆ
ಮನದೊಳಗೆ ತೊಳಲಾಟ
ಬದಲಿಗೆ ನಿನ್ನ ಚಿಂತನೆಯ ನೀನೇ ತಿದ್ದಿ–ತೀಡು
ಕಾಣುವೆ ಸುತ್ತ–ಮುತ್ತ ನೈಜ ಪ್ರಕೃತಿಯ ಸೊಗಡು.

ಕಾಣುವ ಕಂಗಳೆರಡು
ಕೇಳುವ ಕಿವಿಗಳೆರಡು
ಮನದಲ್ಲಿ ಹುಟ್ಟುವ
ಆತಂಕ ನೂರಾರು
ಸಹಿಸಿಕೊಳ್ಳಲು ಹೃದಯ
ಮಾತ್ರ ಒಂದು
ಸುಮ್ಮನಿರಲಿ ಬಿಡು ಎಂದೆಂದು...



# ‘ಆಟಿಟೊಂಜಿ ಕೂಟ’



ಕಾಸರಗೋಡು ಶಿವಬ್ರಾಹ್ಮಣ ಮಹಿಳಾ ಘಟಕದ ಸದಸ್ಯೆಯರಿಂದ ಜುಲೈ 27ರಂದು ಶ್ರೀಮತಿ ನಯನಾ ಶಂಕರರಾಜ್ ಅವರ ಮನೆಯಲ್ಲಿ ‘ಆಟಿಟೊಂಜಿ ಕೂಟ’ ಕಾರ್ಯಕ್ರಮವನ್ನು ಬಹಳ ಸಂಭ್ರಮದಿಂದ ಆಚರಿಸಲಾಯಿತು. ಆಟಿ ತಿಂಗಳಲ್ಲಿ ಕರಾವಳಿ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ತಯಾರಿಸುವ ಕೆಲವು ಖಾದ್ಯಗಳನ್ನು 15 ಸದಸ್ಯೆಯರು ಅವರವರ ಮನೆಯಿಂದ ತಯಾರಿಸಿ ತಂದಿದ್ದರು. ಮುಖ್ಯ ಅತಿಥಿಯಾಗಿ ಮಂಗಳೂರಿನ ಪಾಕತಜ್ಞೆ ಶ್ರೀಮತಿ ಶಾಂತಾ ವಸಂತ ಅವರು ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸುವುದರೊಂದಿಗೆ ಕೆಲವು ಗುಜರಾತಿ ಖಾದ್ಯಗಳ ತಯಾರಿಕೆಯ ಪ್ರಾತ್ಯಕ್ಷಿಕೆ ನೀಡಿದರು. ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಶಾನ್‌ಭೋಗ್ ಅವರು ಸ್ವಾಗತಿಸಿ, ಅತಿಥಿಗಳಿಗೆ ಸ್ಮರಣಿಕೆ ನೀಡಿದರು. ಶ್ರೀಮತಿ ಪ್ರಭಾ ರಮೇಶ್ ವಂದಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶಿವಬ್ರಾಹ್ಮಣ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಅಲ್ಲಿ ಸಿದ್ಧಪಡಿಸಿದ ಶುಚಿರುಚಿಯಾದ ಖಾದ್ಯಗಳನ್ನು ಸವಿದು, ಅದಕ್ಕೆ ಕಾರಣಕರ್ತರಾದ ಮಹಿಳಾ ಘಟಕದವರನ್ನು ಶ್ಲಾಘಿಸಿದರು.

# ಪದೋನ್ನತಿ



ಪ. ಸಂಜಯ ಕುಮಾರ್ ರಾವ್ ಇವರು ದಿ ನ್ಯೂ ಇಂಡಿಯಾ ಇನ್ಶೂರೆನ್ಸ್ ಕಂಪನಿ ಇದರ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಮಂಡಲ ಪ್ರಬಂಧಕರಾಗಿ (Divisional Manager) ಪದೋನ್ನತಿಯನ್ನು ಪಡೆದಿರುತ್ತಾರೆ. ಇವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಅಭಿನಂದನೆಗಳು.

# ಮೂಡುಬಿದಿರೆ ರತ್ನಾಕರ ರಾಯರ ಗಣೇಶ ವಿಗ್ರಹ ರಚನೆ



ಮೂಡುಬಿದಿರೆ ದೊಡ್ಮನೆ ರಸ್ತೆಯ ಶ್ರೀ ಚಂದ್ರಶೇಖರ ದೇವಾಲಯದ ಅರ್ಚಕ ಮೊಕ್ತೇಸರರಾದ ಶ್ರೀ ರತ್ನಾಕರ ರಾವ್‌ರವರು 1988ರಲ್ಲಿ ದೇವಾಲಯದಲ್ಲಿ ಚೌತಿಯಂದು ಗಣಪತಿಯನ್ನಿಟ್ಟು ಪೂಜಿಸುವ ಉದ್ದೇಶದಿಂದ ಸ್ವತಃ ಕೈಯಾರೆ ಗಣಪತಿ ರಚಿಸಲು ಪ್ರಾರಂಭಿಸಿದರು. ಹೀಗೆ ಮೂರ್‍ನಾಲ್ಕು ವರ್ಷಗಳ ತರುವಾಯ ಇವರು ರಚಿಸಿದ ವಿಗ್ರಹವನ್ನು ಕಂಡು ಸಂತಸಗೊಂಡ ಸ್ಥಳೀಯರ ಆಗ್ರಹಕ್ಕೆ ಕಟ್ಟುಬಿದ್ದು ಸಾರ್ವಜನಿಕರಿಗೂ ವಿಗ್ರಹ ಮಾಡಿಕೊಡಲು ಪ್ರಾರಂಭಿಸಿದರು. ಪ್ರತೀ ವರ್ಷವೂ ಒಂದೊಂದು ವಿಗ್ರಹದಂತೆ ಹೆಚ್ಚಾಗುತ್ತಾ ಮುಂದುವರೆದು ಕಳೆದ 4 ವರ್ಷದಿಂದ 13 ವಿಗ್ರಹಗಳು ರಚನೆಗೊಳ್ಳುತ್ತಿವೆ. ಇವರು ಮಾಡಿದ ವಿಗ್ರಹಗಳಿಗೆ ಪ್ರತೀ ವರ್ಷವೂ ವಿವಿಧ ಆಭರಣಗಳ ಕೊಡುಗೆಗಳು ಹೆಚ್ಚುತ್ತಿರುವುದು ಸಾರ್ವಜನಿಕರಿಗೂ ಸಂತಸ ತಂದಿದೆ. ಇದೇ ರತ್ನಾಕರ ರಾಯರಿಗೆ ಆತ್ಮತೃಪ್ತಿ ತಂದಿದೆ.

ಅಂತೂ ನಮ್ಮವರೊಬ್ಬರು ಬಹಳ ನಯ, ನಾಜೂಕಿನ ಗಣಪತಿ ವಿಗ್ರಹ ರಚನೆಯ ಕಾರ್ಯದಲ್ಲೂ ಸಿದ್ಧಹಸ್ತರೆಂದು ಹೇಳಿಕೊಳ್ಳಲು ಸಂತಸವಾಗುತ್ತದೆ. ಇವರು ಬಹಳ ಮಡಿವಂತಿಕೆಯಿಂದ ಈ ವಿಗ್ರಹವನ್ನು ರಚಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಹೀಗಾಗಿ ದೇವಾಲಯದ ಅರ್ಚಕತನದೊಂದಿಗೇ ವಿವಿಧ ಸಮಾಜಮುಖಿ – ಧಾರ್ಮಿಕ ಕಾರ್ಯದಲ್ಲಿ ತೊಡಗಿರುವ ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ನೆಮ್ಮದಿ ದೊರಕಿ ಸಂತೃಪ್ತಿ ತುಂಬಲೆಂದು ಹಾರೈಸುತ್ತೇವೆ.

***ಸಚಿತ್ರ ವರದಿ : ರಾಯೀ ರಾಜಕುಮಾರ್, ಮೂಡುಬಿದಿರೆ***



*ಒಂದನೇ ಪುಟದಿಂದ*

## 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ'

ಚಾತುರ್ಮಾಸದಲ್ಲಿ ಗುರುಗಳ ಭೇಟಿಯಿಂದ ವಿಶೇಷ ಪುಣ್ಯಪ್ರಾಪ್ತಿಯಾಗುತ್ತದೆ ಹಾಗೂ ನಮಗೂ ತುಂಬಾ ಸಂತೋಷವಾಗುತ್ತದೆ. ಹಾಗಾಗಿ ನೆರೆದಿರುವ ಎಲ್ಲಾ ಸ್ಥಾನಿಕ ಸಮಾಜದ ಭಕ್ತರಿಗೆ ನನ್ನ ಸಂಪೂರ್ಣ ಅನುಗ್ರಹವಿದೆ ಎಂದು ಆಶೀರ್ವಚಿಸಿದರು. ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಅನುಗ್ರಹವನ್ನು ಮನತುಂಬಿಕೊಂಡ ಸದಸ್ಯರು ಗುರುಗಳಿಂದ ಫಲಮಂತ್ರಾಕ್ಷತೆ ಪಡೆದು, ಪ್ರಸಾದ ಭೋಜನ ಪಡೆದು ಮತ್ತೆ ಮಂಗಳೂರಿನತ್ತ ಪ್ರಯಾಣ ಬೆಳೆಸಿದೆವು. ಮತ್ತೆ ಬಸ್ಸಿನಲ್ಲಿ ಚಿತ್ರಗೀತೆ, ಅಂತ್ಯಾಕ್ಷರಿ, ಮಿಮಿಕ್ರಿಗಳು ಮೊಳಗತೊಡಗಿದವು. ಹೆದ್ದಾರಿಯಲ್ಲಿ ಉಪಾಹಾರ ಸವಿದ ಸದಸ್ಯರು ತಮ್ಮ ಪ್ರತಿಭಾ ಪ್ರದರ್ಶನ ನೀಡುತ್ತಾ ಮುಂದುವರಿದರು. ನಮ್ಮ ಶೃಂಗೇರಿ ಯಾತ್ರೆಯಲ್ಲಿ ಭಾಗವಹಿಸಿದ, ಸಹಕರಿಸಿದ ಎಲ್ಲರಿಗೂ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು ಹಾಗೂ ಹೃದಯಪೂರ್ವಕ ವಂದನೆಗಳು.

*ವರದಿ : ಶ್ರೀ ಪಿ. ಶ್ರೀಕಾಂತ್ ರಾವ್; ಚಿತ್ರ : ಶ್ರೀ ರಘುವೀರ್ ಪೆರ್ಡೂರು*

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ



ದಿವಂಗತ ಮಾರ್ಪಳ್ಳಿ ರಾಮಕೃಷ್ಣಯ್ಯನವರ ಹಿರಿಯ ಮಗಳು ಪಾದೆಬೆಟ್ಟು ದಿ. ಕೃಷ್ಣ ರಾವ್‌ರವರ ಪತ್ನಿ ಶ್ರೀಮತಿ ರುಕ್ಮಿಣಿ ಅಮ್ಮನವರು ದಿನಾಂಕ 28-07-2014ರ ಸೋಮವಾರದಂದು ನಿಧನ ಹೊಂದಿದರು. ಅವರು ಮೂರು ಗಂಡು, ಮಗಳು ಮತ್ತು ಅಪಾರ ಬಂಧು-ಬಾಂಧವರನ್ನು ಅಗಲಿರುತ್ತಾರೆ.

## ಅಪಾರ ಕೀರ್ತಿ ಗಳಿಸಿ...



ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೈಸೂರಿನ ಮರಿಮಲ್ಲಪ್ಪ ಪ್ರೌಢಶಾಲೆಯ ವಿದ್ಯಾರ್ಥಿನಿ ಕುಮಾರಿ ಪ್ರೇರಣಾ ರಾವ್ 625 ಅಂಕಗಳಲ್ಲಿ 619 ಗಳಿಸಿ ಉನ್ನತ ಸಾಧನೆ ಮಾಡಿರುತ್ತಾರೆ. ಪ್ರಥಮ ಫಲಿತಾಂಶದಲ್ಲಿ ನಿರೀಕ್ಷಿತ ಅಂಕಗಳು ಲಭಿಸದ ಕಾರಣ ಇಂಗ್ಲಿಷ್ ಹಾಗೂ ವಿಜ್ಞಾನ ವಿಷಯಗಳಲ್ಲಿ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ್ದು ಇದೀಗ ಮರುಮೌಲ್ಯಮಾಪನದಲ್ಲಿ ಇಂಗ್ಲಿಷ್‌ನಲ್ಲಿ 16 ಹಾಗೂ ವಿಜ್ಞಾನದಲ್ಲಿ 1 ಅಂಕ ಹೆಚ್ಚುವರಿಯಾಗಿ ಲಭಿಸಿದ್ದು ಒಟ್ಟು 625ರಲ್ಲಿ 619 ಅಂಕಗಳನ್ನು ಗಳಿಸಿ ಸಾಧನೆ ಮಾಡಿರುತ್ತಾರೆ. ಈ ಬಾರಿಯ ಪ್ರಥಮ ಸ್ಥಾನಿಯು 622 ಅಂಕಗಳನ್ನು ಗಳಿಸಿದ್ದು ಪ್ರೇರಣಾಳು ಕೇವಲ 3 ಅಂಕಗಳಿಂದ ಮಾತ್ರ ಹಿಂದಿದ್ದು ರಾಜ್ಯದ ಉನ್ನತ 10 ಸ್ಥಾನಿಗಳಲ್ಲಿ ಒಬ್ಬಳಾಗಿದ್ದಾಳೆ. ಕುಮಾರಿ ಪ್ರೇರಣಾಳು ನಮ್ಮ ಸಮಾಜದ ಮೈಸೂರಿನ ಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಎಮ್. ಆರ್. ಜಗದೀಶ್ ರಾವ್ ಮತ್ತು ಶ್ರೀಮತಿ ಗಾಯತ್ರಿ ದಂಪತಿಗಳ ಪುತ್ರಿ ಹಾಗೂ ಮಂಗಳೂರಿನ ಶ್ರೀ ಎಮ್. ರಘುರಾಮ ಶರ್ಮ ಮತ್ತು ಶ್ರೀಮತಿ ರಾಧಾ ದಂಪತಿಗಳ ಪೌತ್ರಿಯಾಗಿದ್ದು ಪ್ರೇರಣಾಳ ಈ ಸಾಧನೆಯಿಂದ ನಮ್ಮ ಸಮಾಜವು ಹೆಮ್ಮೆಪಡುವಂತಾಗಿದೆ.



## ವಿದೇಶ ಪ್ರಯಾಣ

ಉಜ್ಜೋಡಿಯ ಶ್ರೀ ಸೂರ್ಯನಾರಾಯಣ ರಾವ್‌ರವರು 'ಗೋಲ್ಡ್ ಮೆನ್ ಸ್ಯಾಚ್'ನ ಬೆಂಗಳೂರಿನ ಕಛೇರಿಯಲ್ಲಿ ಉನ್ನತ ಹುದ್ದೆಯಲ್ಲಿದ್ದು ಈಗ ಪದೋನ್ನತಿ ಹೊಂದಿ ಉದ್ಯೋಗ ನಿಮಿತ್ತ ಲಂಡನ್‌ಗೆ ತೆರಳಿದ್ದಾರೆ. ಇವರು ಮಂಗಳೂರಿನ ಉಜ್ಜೋಡಿ ಶ್ರೀ ಭುಜಂಗ ರಾವ್ ಹಾಗೂ ಶ್ರೀಮತಿ ಸುನೀಲ ಬಿ. ರಾವ್‌ರವರ ಸುಪುತ್ರರಾಗಿರುತ್ತಾರೆ.


**ಸಿ. ಯಂ. ರಾವ್ ಕಟಪಾಡಿ**
ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು




*ಶ್ರೀ ಮುರಳೀಧರ ರಾವ್*
*'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105*
ಮೊಬೈಲ್ : 9741816166
*ತಪ್ಪದೆ ವೀಕ್ಷಿಸಿ : ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು'*
*ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ*

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
Near Vijaya Pen Mart
Hampankatta, Mangalore - 1



The RIGHT Place for the Customer
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 322386
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
ಪ್ರಮೋದ್ ಟವರ್ಸ್, ಮಂಗಳೂರು

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTER**
*Dealers in : Computers Hardware and Peripherals*
*Computer Sales & Services*



*Alvares Centre, N.H. 17, Nanthoor, Mangalore - 575 005*

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು



**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ಪುಣ್ಯ ಸ್ಮರಣೆ



**ಶ್ರೀಮತಿ ಯಶೋದ ಸದಾಶಿವ ರಾವ್**

ಜನನ : 07-08-1950 ● ನಿಧನ : 11-09-2011

ಶ್ರೀ ರಕ್ಷೆಯಲಿ ನೀ ಬೆಳೆಸಿ ಪೋಷಿಸಿದ ನಮ್ಮೀ ಕುಟುಂಬ
ಮರೆಯಲೆಂತು ನಿನ್ನ ಮಧುರ ಬದುಕು ಕೃತಿಗಳ ಸ್ಫೂರ್ತಿಯ ಸಂಬಂಧ
ತಿಂಗಳು, ವರ್ಷಗಳು ಉರುಳಿ, ಮೂರು ವರ್ಷದ ನೀನಿಲ್ಲದ ಏಕಾಂತ
ಯಮನ ಪಾಷವು ನಿರ್ದಾಕ್ಷಿಣ್ಯದಲಿ ಕರೆದೋಯ್ತು ನಿನ್ನ ಜೀವಂತ
ಶೋಕದಲಿ ನೆನೆಯುವೆವು ನಮ್ಮ ಜೀವನಪರ್ಯಂತ
ದಯಾಮಯ ಶಿವನು ಶಾಶ್ವತವಾದಲ್ಲಿ ನಮ್ಮ ಹೃದಯದಲಿ
ನೀ ಅಮರ, ಇದು ನಿಶ್ಚಿತ.
ಎಂತು ಪೊಗಳಲಿ ನಿನ್ನ ಸ್ವಭಾವತಃ ಮಾತು ಬೆಳ್ಳಿ ಮೌನ ಬಂಗಾರ
ಸದಾ ನಿನ್ನ ಸೌಮ್ಯ ಸುಂದರ ರೂಪ ಹಾಸುತಿದೆ ಕಣ್ಣಲ್ಲಿ ಮಿಂಚಿನಂತೆ
ರಾತ್ರಿ ಹಗಲೆನ್ನದೆ ದುಡಿದ ಜೀವಾತ್ಮ ಬಯಸಿತೇ ಪರಮಾತ್ಮನ ಪ್ರಪಂಚ
ವಂದಿಸುವೆವು ಕಣ್ಣಂಚಿನಲಿ ನೀರ ಹನಿಯ ಚಿಮ್ಮಿ,
ಈಶ ಶಕ್ತಿಯಲಿ ನೀ ಅಲ್ಲಿರು ದಿವ್ಯ ಪ್ರಶಾಂತ!

ಶ್ರೀ ಉಚ್ಚಿಲ ಎಸ್. ಸದಾಶಿವ ರಾವ್ (ಪತಿ)
ಶ್ರೀಮತಿ ಪವಿತ್ರ ರಾವ್ (ಪುತ್ರಿ)
ಶ್ರೀ ಮುರಳೀಧರ ರಾವ್ ಅದ್ಯಪಾಡಿ (ಅಳಿಯ)
ಶ್ರೀಮತಿ ಸುಚಿತ್ರಾ ರಾವ್ (ಪುತ್ರಿ)
ಶ್ರೀ ಅರುಣ ಎನ್. ರಾವ್ ಮುಂಬೈ (ಅಳಿಯ)
ಶ್ರೀಮತಿ ಸುಮಿತಾ ರಾವ್ (ಪುತ್ರಿ)
ಶ್ರೀ ಪಿ. ಎಸ್. ವಸಂತಕುಮಾರ್ ಬೆಂಗಳೂರು (ಅಳಿಯ)
ಮತ್ತು ಮೊಮ್ಮಕ್ಕಳು ಹಾಗೂ ಬಂಧುಗಳು


**PREETHIKA AUTOMOBILES**
☎ 2493633
9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
*Dealers in :*
**Minda Switches, M. K. Products, Swiss Auto Products, Power Coils**

Prop. : *Pradeep V. Rao* M. : 9880093799
9844541917
**VYBHAV ENTERPRISES**
All Mobile Recharges & DTH Recharges
**BALMATTA REAL ESTATE**
**Contact for Sites, Houses, Rental Houses & Flats and all Documentation**
**Ground Floor, Dwaraka Complex**
**Arya Samaja Road, Balmatta, Mangalore - 575 003**
E-mail : pradeepvrao55@gmail.com




ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೈಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಚೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟಾರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.
*ಸಂಪರ್ಕಿಸಿರಿ :*
LIC
ಪಿ. ರಾಜೇಂದ್ರ ರಾವ್, ಬಿ.ಎಸ್ಸಿ.
**ಕುಂಜತ್ತಬೈಲ್, ಮಂಗಳೂರು, ಮೊಬೈಲ್ : 9242214842**

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
***Authorised Dealers for :***
**Vijai Super GP 150 &**
**Vikram 3 Wheelers (Petrol & Diesel)**



**Prakash Rao** **Mob : 8453679734, 9986071684**



**KRISHNA ELECTRONICS**
*Dealers in :*
***Electronic Spares & T.V., VCD, DVD etc Service Centre, Car Cds, Speaker, Sub Woofers, USB Players C.C. Camers***
**Opp. Service Bus Stand, Rao & Rao Circle, City Towers**
**MANGALORE - 575 003**

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

**ಹೆಬ್ಬಾರ್ ಎಂಟರ್‌ಪ್ರೈಸಸ್**
**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893

ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

Prop. : *Kishore Kumar Kedige* Ph. : 2231524
M. : 9880726325



**KYADIGE AUTOMOBILES**
**Opp. to D. P. Stores Main Road, B. C. Road, Bantwal Tq.**
***Dealers in : 2 & 3 WHEELERS SPARES***





## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಮಠದಬೆಟ್ಟು, ಕೋಡಿಂಬಾಡಿ, ಪುತ್ತೂರು**

ಆತ್ಮೀಯ ಸಮಾಜ ಬಾಂಧವರೇ,

ಶ್ರೀ ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರ ಪರಮಾನುಗ್ರಹದೊಂದಿಗೆ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ **'ನವರಾತ್ರಿ ಉತ್ಸವ'** ಹಾಗೂ **'ಶ್ರೀ ಚಂಡಿಕಾಹೋಮ'** (ದಿನಾಂಕ 28–9–2014) ದಿನಾಂಕ 25–9–2014ರಿಂದ ದಿನಾಂಕ 3–10–2014ರ ತನಕ ನಡೆಯಲಿರುವುದರಿಂದ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಸನ್ನಿಧಿಗೆ ಆಗಮಿಸಿ, ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಯಂ. ನಾಗೇಶ ಶರ್ಮ** — ಕಾರ್ಯದರ್ಶಿ ಮತ್ತು **ಅರ್ಚಕರು**

**ಟಿ. ಅಣ್ಣಪ್ಪಯ್ಯ ತೆಂಕಿಲ** — ಅಧ್ಯಕ್ಷರು

**ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ ಜೀರ್ಣೋದ್ಧಾರ ಸಮಿತಿ**


## ವಿಶೇಷ ಸೂಚನೆ





**ಸಮಾಜ ಬಾಂಧವರೇ,**

ಹುಟ್ಟುಹಬ್ಬ, ಬ್ರಹ್ಮೋಪದೇಶ, ಮದುವೆ ಸಮಾರಂಭ, ಇತರ ವಿಶೇಷ ಕಾರ್ಯಕ್ರಮಗಳು ಹಾಗೂ ಸ್ಥಾನೀಯ ಕಾರ್ಯಕ್ರಮಗಳ (ಛಾಯಾಚಿತ್ರ ಸಹಿತ) ವರದಿಗಳನ್ನು ಅಥವಾ ಆಮಂತ್ರಣ ಪತ್ರಿಕೆಗಳನ್ನು ಕಳುಹಿಸಿದಲ್ಲಿ **ಉಚಿತವಾಗಿ ಪ್ರಕಟಿಸಲಾಗುವುದು.** ಈ ವಿಳಾಸಕ್ಕೆ ತಲುಪಿಸಲು ವಿನಂತಿಸುತ್ತೇವೆ.





**ಸಂಪಾದಕರು, 'ಜ್ಞಾನಶಕ್ತಿ' ಮಾಸ ಪತ್ರಿಕೆ**

**ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ಚರ್ಚ್ ರಸ್ತೆ, ಮಂಗಳೂರು - 575 003**

ಇ–ಮೇಲ್ ವಿಳಾಸ : **jnanashakthisss@gmail.com**

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಧನಸಹಾಯವಿತ್ತ ದಾನಿಗಳು

| | | |
|---|---|---|
| 172 | ಕೆ. ವೆಂಕಟ ರಾವ್ ನಿಧಿಮುಂಡ, ಕಾವು | 1,00,001 |
| 173 | ಯಂ. ಉಮೇಶ ರಾವ್, ಮಂಗಳೂರು | 50,000 |
| 174 | ಯಂ. ನಾಗೇಶ ಶರ್ಮ, ಮಠದಬೆಟ್ಟು | 25,000 |
| 175 | ಎ. ಸುದರ್ಶನ ರಾವ್, ಪುತ್ತೂರು | 25,000 |
| 176 | ಯಂ. ಗಂಗಾಧರ ರಾವ್, ಮಂಗಳೂರು | 20,111 |
| 177 | ಡಾ. ಯಂ. ರಾಮಕೃಷ್ಣ ರಾವ್, ಪುತ್ತೂರು | 10,000 |
| 178 | ಕುಮಾರಸ್ವಾಮಿ, ಸುಳ್ಯ | 10,000 |
| 179 | ಶೃಂಗೇರಿ ಶಾರದಾಪೀಠ, ಶೃಂಗೇರಿ | 10,000 |
| 180 | ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಉಡುಪಿ | 10,000 |
| 181 | ಎಂ. ಆರ್. ವಾಸುದೇವ ರಾವ್, ಮಂಗಳೂರು | 10,000 |
| 182 | ಯನ್. ಯಸ್. ನಟರಾಜ್, ಪುತ್ತೂರು | 10,000 |
| 183 | ಯಂ. ಶಾಂತಾರಾಮ ರಾವ್, ಮಂಗಳೂರು | 10,000 |
| 184 | ಯಂ. ಗುರುಪ್ರಸಾದ್, ಉಜ್ರೆ | 10,000 |
| 185 | ಯಂ. ಉದಯಶಂಕರ, ಪುತ್ತೂರು | 10,001 |
| 186 | ಪ್ರಭಾಕರ ರಾವ್, ಉಡುಪಿ | 10,000 |
| 187 | ಮುಂಡ್ಕೂರು ಗೋವಿಂದರಾವ್ ಸ್ಮರಣಾರ್ಥ, ಮೂಲ್ಕಿ | 15,000 |
| 188 | ಕೆ. ರಾಮ ರಾವ್, ಕೊಕ್ರಾಡಿ | 5,000 |
| 189 | ಮಿತ್ರಸಮಾಜ (ರಿ.), ಪುತ್ತೂರು | 5,000 |
| 190 | ರಘುರಾಮ ರಾವ್, ಮಂಗಳೂರು | 5,000 |
| 191 | ಡಾ. ಸುನೀಲ್ ರಾವ್, ಮಂಗಳೂರು | 5,000 |
| 192 | ಎ. ಪಿ. ವೈ. ಶರ್ಮಾ, ಬೆಂಗಳೂರು | 5,000 |
| 193 | ಎಂ. ಎಸ್. ರಘುನಾಥ ರಾವ್, ಪುತ್ತೂರು | 5,000 |
| 194 | ಸತೀಶ್ ರಾವ್, ಉಪ್ಪಿನಂಗಡಿ | 5,000 |
| 195 | ಬಿ. ಕೆ. ರಂಜಿನಿ, ಭಟ್ಕಳ | 5,000 |
| 196 | ರಾಧಾಕೃಷ್ಣ ರಾವ್, ಮೂಡುಗೆರೆ | 5,000 |
| 197 | ಬಿ. ರಮೇಶ್ ರಾವ್, ವಗ್ಗ ಬಂಟ್ವಾಳ | 5,050 |
| 198 | ಅಹಲ್ಯಮ್ಮ, ಕೊಳ್ಳೇಗಾಲ | 5,020 |
| 199 | ಯಂ. ಚಂದ್ರಶೇಖರ ರಾವ್, ಸೂರಿಕುಮೇರು | 5,000 |
| 200 | ಡಾ. ವರದರಾಜ ಚಂದ್ರಗಿರಿ, ಪುತ್ತೂರು | 5,000 |
| 201 | ನಿಧಿಕುಂಭ ಸಮರ್ಪಣೆ (ಭಕ್ತಾದಿಗಳಿಂದ) ಮಠಂತಬೆಟ್ಟು | 6,080 |
| 202 | ಎಸ್. ಸದಾನಂದ ರಾವ್, ಪುತ್ತೂರು | 5,005 |
| 203 | ಸಿ. ಎಸ್. ರಾವ್, ಉಡುಪಿ | 5,000 |
| 204 | ಪಿ. ದಿವಾಕರ ರಾವ್, ಮಂಗಳೂರು | 5,000 |
| 205 | ಬಿ. ಎನ್. ಕೌಳಿಗೆ, ಪುತ್ತೂರು | 3,000 |
| 206 | ಕೃಷ್ಣಪ್ರಸಾದ್, ಪುತ್ತೂರು | 3,000 |
| 207 | ಟಿ. ರಾಮ ರಾವ್, ಪುತ್ತೂರು | 3,000 |
| 208 | ಪಿ. ಸರಸ್ವತಿ, ಬಂಟ್ವಾಳ | 2,000 |
| 209 | ಕೆ. ಗೋಪಾಲ ರಾವ್, ಕಡಬ | 2,500 |
| 210 | ಡಾ. ಹರೀಶ್ ಡಿ., ಬೈರಿಕಟ್ಟೆ | 2,000 |
| 211 | ಜಾನಕಿ, ರಾಮಸ್ವಾಮಿ, ಮಂಗಳೂರು | 2,000 |
| 212 | ಶಿವರಾವ್, ಸುಬ್ರಹ್ಮಣ್ಯ | 2,000 |
| 213 | ವಿಜಯಲಕ್ಷ್ಮೀ ನಂದಳಿಕೆ, ಮಂಗಳೂರು | 1,255 |
| 214 | ಆಶ್ರಿತ, D/o. ಡಾ. ಸುಧೀರ್ ರಾವ್, ಪುತ್ತೂರು | 1,250 |
| 215 | ಭವಿತ, D/o. ಡಾ. ಸುಧೀರ್ ರಾವ್, ಪುತ್ತೂರು | 1,250 |
| 216 | ಹರೀಶ, ಶಿರ್ತಾಡಿ | 1,500 |
| 217 | ಡಾ. ಸುಧೀರ್ ರಾವ್, ಪುತ್ತೂರು | 1,250 |
| 218 | ಭಾವನಾ ಸುಧೀರ್ ರಾವ್, ಪುತ್ತೂರು | 1,250 |
| 219 | ಕೆ. ಸುಬ್ರಹ್ಮಣ್ಯ ಪ್ರಭು, ಕೋಡಿಂಬಾಡಿ | 1,006 |
| 220 | ಎನ್. ಎಂ. ಸುರೇಶ್ ರಾವ್, ಮಂಗಳೂರು | 1,001 |
| 221 | ಪಿ. ಅನಂತೇಶ್ವರಯ್ಯ, ಪುತ್ತೂರು | 1,010 |
| 222 | ಪಿ. ಯನ್. ಗೋಪಾಲಕೃಷ್ಣ ರಾವ್, ಕಾವು | 1,001 |
| 223 | ಟಿ. ಬಿ. ಪ್ರಭಾಕರ ರಾವ್, ಪುತ್ತೂರು | 1,001 |
| 224 | ಪಿ. ತುಲಸೀದಾಸ್, ಪುತ್ತೂರು | 1,001 |
| 225 | ವೇದಾವತಿ ನಂದಳಿಕೆ, ಕಾರ್ಕಳ | 1,000 |
| 226 | ಯನ್. ಯಸ್. ದಿನೇಶ್ ರಾವ್, ಕೊಡಿಪಾಡಿ | 1,000 |
| 227 | ನಾಗಭೂಷಣ ಶಾಸ್ತ್ರಿ, ಮುಂಡ್ಕೂರು | 1,000 |
| 228 | ಯಂ. ಬಾಲಚಂದ್ರ ರಾವ್, ಕೊಳ್ಳೇಗಾಲ | 1,000 |
| 229 | ಆರ್. ದಿನೇಶ್ ರಾವ್, ಮಂಗಳೂರು | 1,000 |
| 230 | ಕೆ. ಪ್ರದೀಪ್ ರಾವ್, ಮಂಗಳೂರು | 1,000 |
| 231 | ಪ್ರಭಾಕರ ರಾವ್, ಗುರುವಾಯನಕೆರೆ | 1,000 |
| 232 | ಯಂ. ಪ್ರಜ್ಞಾ ಶರ್ಮ, ಪುತ್ತೂರು | 1,000 |
| 233 | ಶಿವರಾಮ ರಾವ್, ಬೈರಿಕಟ್ಟೆ | 1,000 |
| 234 | ಅರುಣ ಕುಮಾರ್ ಜಡೆಮನೆ, ಕಡಬ | 1,005 |
| 235 | ಎಸ್. ಶಿವರಾವ್, ಆಲಂಕಾರು, ಕಡಬ | 1,000 |
| 136 | ಡಾ. ವೀಣಾ, ಸುಳ್ಯ | 1,000 |
| 137 | ಶೋಭಾ ಆರ್. ರಾವ್, ವಗ್ಗ, ಬಂಟ್ವಾಳ | 1,000 |
| 138 | ಡಾ. ಕೆ. ಕೆ. ಶ್ಯಾನುಭೋಗ್, ಕಾಸರಗೋಡು | 500 |
| 139 | ಎಂ. ಆನಂದ ರಾವ್, ಮಂಗಳೂರು | 500 |
| 140 | ಶ್ರೀನಿವಾಸ ಮೂರ್ತಿ, ಮಂಗಳೂರು | 500 |
| 141 | ರಘುನಾಥ, ಕೋಡಿಂಬಾಡಿ | 500 |
| 142 | ನಾಗೇಶ ಪೂಜಾರಿ, ಕೋಡಿಂಬಾಡಿ | 500 |
| 143 | ಅರುಣ ಕುಮಾರ್, ಸುಳ್ಯ | 500 |
| 144 | ಕೃಷ್ಣರಾಜ ಶರ್ಮ, ಬಿ.ಸಿ. ರೋಡ್ | 500 |
| 145 | ಶ್ರೀ ರಾಘವೇಂದ್ರ, ಕಡಬ | 500 |

*(ಮುಂದುವರಿಯುವುದು)*

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
**Pradeep Rao K.**
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–
**ಶ್ರೀಮತಿ ಕುಸುಮ ನವೀನ್ ಕುಮಾರ್**
**ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್**
**ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್**



*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***

**PRAVEEN KUMAR ADYAPADY**
**ADVOCATE**
**MANGALORE OFFICE**
JANVI PLAZA, IInd FLOOR
BUNTS HOSTEL, MANGALORE
**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
**We undertakes : Civil, Criminal, Motor Vehicles, A.C., D.C. Cases, Land Conversion, Registration etc.**



**ಹೋಮಿಯೋಪತಿ ಹಾಗೂ**
**ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**
**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
**ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್**
**ಸ್ಪರ್ಶ ಮೆಡಿಕಲ್ ಸೆಂಟರ್**
**ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2**
ದೂರವಾಣಿ : 0824-4276666 ಮೊಬೈಲ್ : 9844063805



**SHARMA ENTERPRISES**
**KANKANADY, MANGALORE - 575 002**
**Mob. : 9844187083**
**Prop. :**
***Chethan Sharma***

# ಚಾತುರ್ಮಾಸ ವ್ರತಾಚರಣೆ





ಹಬ್ಬ ಹರಿದಿನಗಳ ಮೂಲಕ ಭಗವಂತನ ಇರವನ್ನು ಅನುಭವಿಸುತ್ತಾ, ಪ್ರತಿಯೊಂದು ಕಾರ್ಯಗಳೂ ಭಗವದರ್ಪಣವೆಂದು ಚಿಂತಿಸಿ, ಮನುಷ್ಯ ಜೀವನವನ್ನು ಸಾರ್ಥಕಗೊಳಿಸಲು ಹೇಳಿ ಮಾಡಿಸಿದಂತಹ ಸಂಸ್ಕೃತಿಯೆಂದರೆ ಅದು ಭಾರತೀಯ ಸಂಸ್ಕೃತಿ. ಪ್ರತಿಯೊಂದು ಹಬ್ಬಗಳು ಸಾಮಾನ್ಯವಾಗಿ ಆಧ್ಯಾತ್ಮಿಕ, ನೈತಿಕ, ಸಾಮಾಜಿಕ, ಮಾನಸಿಕ, ಶಾರೀರಿಕ ವಿಷಯಗಳ ಮೇಲೆ ತುಲನಾತ್ಮಕವಾಗಿ ರೂಪುಗೊಂಡಿರುವುದು ನಮ್ಮ ಸಂಸ್ಕೃತಿಯ ವಿಶೇಷತೆ. ಅಂದರೆ ಆಧ್ಯಾತ್ಮಿಕ ಹಿನ್ನೆಲೆಯನ್ನು ವ್ಯಕ್ತಿಯು ನೈತಿಕವಾಗಿ ಹಬ್ಬವನ್ನು ಸ್ವೀಕರಿಸಿದರೆ, ಇನ್ನೊಬ್ಬ ಸಾಮಾಜಿಕವಾಗಿ ಅದನ್ನು ಆಸ್ವಾದಿಸುತ್ತಾನೆ. ಈ ಎರಡು ವಿಚಾರಗಳನ್ನು ಒಪ್ಪದವನು ಮಾನಸಿಕವಾಗಿ ಇದಕ್ಕೆ ಪ್ರಾಧಾನ್ಯತೆ ಕೊಟ್ಟರೆ, ಕಾಯ ವ್ಯಾಮೋಹವಿರುವ ಮಗದೊಬ್ಬ ವೈಜ್ಞಾನಿಕವಾಗಿ ಇಂತಹ ಕಾರ್ಯಕ್ರಮಗಳಿಗೆ ಮುದ್ರೆಯೊತ್ತುತ್ತಾನೆ. ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯನ್ನು ಆಳಕ್ಕಿಳಿದು ಅಭ್ಯಸಿಸಿದರೆ 'ಇಲ್ಲಿ ಎಲ್ಲವೂ ಇದೆ, ಬಲ್ಲವರಿಗೆ ಬೆಲ್ಲವಿದೆ' ಎಂಬ ಪ್ರಾಜ್ಞರ ನುಡಿಮುತ್ತಿಗೆ ನಾವು ಶರಣಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಇದೀಗ ಆರಂಭವಾಗಲಿರುವ ಚಾತುರ್ಮಾಸ್ಯದ ಬಗ್ಗೆ ಇಣುಕು ನೋಟ.

ಚಾತುರ್ಮಾಸ್ಯಾಚರಣೆ ಎಂಬುದು ಹಬ್ಬಕ್ಕಿಂತಲೂ ವ್ರತವೆಂದರೆ ಸೂಕ್ತ. ಹಬ್ಬದ ಆಚರಣೆಯ ವಿಶೇಷವಾದ ಕಟ್ಟುಪಾಡುಗಳಿಲ್ಲದೆ ಸಂಭ್ರಮದಿಂದ ಆಚರಿಸುವುದಾದರೆ, 'ವ್ರತ'ಕ್ಕೆ ಅದರದ್ದೇ ಆದ ಕಟ್ಟುಪಾಡುಗಳು ಇರುತ್ತವೆ. ಹಬ್ಬದ ಆಚರಣೆಯಲ್ಲಿ 'ಸುಖ'ದ ಆನಂದ ಆವಿರ್ಭಾವವಾಗುವುದಾದರೆ ವ್ರತ ಪಾಲನೆಯಲ್ಲಿ 'ಆನಂದ'ದ ಸುಖವಿರುತ್ತದೆ.

ಆಷಾಢ' ಏಕಾದಶಿಯಂದು ಚಾತುರ್ಮಾಸ್ಯ ವ್ರತ ಆರಂಭವಾಗುವುದೆಂದು ಮಹಾಭಾರತದಲ್ಲಿ ಉಕ್ತವಾಗಿದೆ. ಆಷಾಢ ಶುಕ್ಲ ಏಕಾದಶಿಯ ದಿವಸ ಉಪವಾಸ ಧಾರಣ ಮಾಡಿ ನಿಯಮಪೂರ್ವಕ ಚಾತುರ್ಮಾಸ್ಯ ವ್ರತವನ್ನು ಆರಂಭಿಸಬೇಕು. ಈ ವ್ರತದ ನಿತ್ಯತ್ವವನ್ನು ಕೂಡಾ ಮಹಾಭಾರತದಲ್ಲಿಯೆ ಪ್ರಸ್ತಾಪಿಸಲಾಗಿದೆ. ಮುಂದಿನ ನಾಲ್ಕು ಮಾಸಗಳ ಕಾಲ ಈ ವ್ರತಾಧಾರಿಯಾಗಿ ಕಾರ್ತಿಕ ಶುದ್ಧ ದ್ವಾದಶಿಯಂದು ಈ ವ್ರತ ಸಮಾಪ್ತಿಯನ್ನು ಮಾಡಬೇಕು.

ಈ ನಾಲ್ಕು ಮಾಸಗಳ ಅವಧಿಯಲ್ಲಿ ಮಾಡಿದ ಸತ್ಕಾರ್ಯಗಳಿಗೆ, ಪುಣ್ಯಕಾರ್ಯಗಳಿಗೆ ವಿಶೇಷ ಫಲವೆಂಬುದು ಪೂರ್ವಾಚಾರ್ಯರ ಮಾತು. ಚಾತುರ್ಮಾಸ ವ್ರತಾಚರಣೆಗೆ ಜಾತಿ / ಪಂಗಡ / ಹೆಣ್ಣು/ ಗಂಡು / ಸನ್ಯಾಸಿ / ಯತಿ / ಗೃಹಸ್ಥರೆಂಬ ಬೇಧವಿಲ್ಲ, ಅಂತೆಯೇ ಅಶೌಚಾದಿ ನಿಷೇಧವಿಲ್ಲ, ಸ್ಕಂದ ಪುರಾಣದಲ್ಲಿ ಬರುವ ಉಕ್ತಿಯಂತೆ, 'ಹೆಣ್ಣೇನು, ಗಂಡೇನು, ಶೌಚವೇನು, ಅಶೌಚವೇನು, ಯಾವುದೂ ಈ ಚಾತುರ್ಮಾಸ್ಯ ವ್ರತಾಚರಣೆಗೆ ಅನ್ವಯಿಸುವುದಿಲ್ಲ'. ಏಕೆಂದರೆ, ಚಾತುರ್ಮಾಸ್ಯ ವ್ರತಾಚರಣೆಯು ಅಷ್ಟೊಂದು ಪುಣ್ಯಪ್ರದವಾಗಿದೆ. ಈಗಾಗಲೇ ಆರಂಭಿಸಿದ ವ್ರತದಲ್ಲಿ ಮೇಲೆ ತಿಳಿಸಿದ ವಿಚಾರ ಬಾಧಕವಾಗುವುದಿಲ್ಲ. ಆದರೆ ವ್ರತ ಆರಂಭಿಸಿದ ಪಕ್ಷದಲ್ಲಿ ಮಾತ್ರ ಅಶೌಚವನ್ನು ಪರಿಗಣಿಸಬೇಕಾಗುತ್ತದೆ. ಸ್ತ್ರೀಯರ ತಿಂಗಳ ಅಶೌಚವೂ ವ್ರತ ಆರಂಭಿಸಿದ ಮೇಲೆ ಅನ್ವಯಿಸುವುದಿಲ್ಲ. ಅಶೌಚವಿದ್ದಾಗಲೂ ಆಹಾರ ನಿಯಮವನ್ನು ಖಂಡಿತಾ ಪಾಲಿಸಬಹುದು.

**ಚಾತುರ್ಮಾಸ್ಯ ಕಾಲದಲ್ಲಿ ಆಹಾರ ನಿಯಮ**

ಶ್ರಾವಣೇ ವಜ್ರಯೇ ಶಾಕಂ ಧ ಭಾದ್ರಪದೇ ತಥಾ ದುಗ್ಧಮಾಶ್ವಯುಜೇ ಮಾಸಿ ಕಾರ್ತಿಕೇದ್ವಿದಲಂ ತಥಾ ವರಹಪುರಾಣೋಕ್ತ ಮಾತಿನಂತೆ ಶ್ರಾವಣದಲ್ಲಿ ಶಾಕ(ತರಕಾರಿ ಸೊಪ್ಪು)ವನ್ನು ಭಾದ್ರಪದದಲ್ಲಿ ಮೊಸರನ್ನು ಆಶ್ವಿನದಲ್ಲಿ ಹಾಲನ್ನು ಹಾಗೂ ಕಾರ್ತಿಕದಲ್ಲಿ ದ್ವಿದಳ/ ಬಹುಬೀಜ ವಸ್ತುಗಳನ್ನು ಸೇವಿಸಬಾರದು. ಸ್ಕಂದ ಪುರಾಣದಲ್ಲಿಯ ಚಾತುರ್ಮಾಸ್ಯ ಕಲ್ಪದಲ್ಲಿ ಬರೆದಿರುವಂತೆ ಈ ನಿಯಮ ಪಾಲಿಸಿದರೆ ಮಾತ್ರ ವ್ರತ ಸಂಪೂರ್ಣವಾಗುತ್ತದೆ. ಇದೇ ಈ ವ್ರತದ ಹೂರಣ.

**ಯಾವುದು ಸೇವಿಸಬಹುದು?**

ಶ್ರಾವಣ ಮಾಸದಲ್ಲಿ ಶಾಕ ವ್ರತದಲ್ಲಿ ತರಕಾರಿ–ಸೊಪ್ಪುಗಳ ನಿಷೇಧ. ಆದರೆ ಒಂದೆಲಗ, ಮಾವು (ನೀರಿನಲ್ಲಿ ಹಾಕಿದ ಮಾವು), ಜೀರಿಗೆ, ಕಾಳುಮೆಣಸು, ಪಚ್ಚೆಹೆಸರು, ನೆಲ್ಲಿಂಡಿ (ಸಂಸ್ಕರಿಸಿದ ನೆಲ್ಲಿ) ಇಷ್ಟು ವಸ್ತುಗಳನ್ನು ಉಪಯೋಗಿಸಬಹುದು. ಭಾದ್ರಪದ ಮಾಸದಲ್ಲಿ ಮೊಸರು ವರ್ಜ್ಯ, ಆದರೆ ಹಾಲು, ಮಜ್ಜಿಗೆ, ತುಪ್ಪ, ಬೆಣ್ಣೆ ಸೇವಿಸಬಹುದು. ಭೋಜ್ಯ ತರಕಾರಿಗಳನ್ನು ಸೇವಿಸಬಹುದು.

ಅಶ್ವಿನದಲ್ಲಿ ಹಾಲು ವರ್ಜ್ಯ. ಆದರೆ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪಗಳಿಗೆ ನಿಷೇಧವಿಲ್ಲ. ಎಲ್ಲಾ ರೀತಿಯ ಭೋಜ್ಯ ತರಕಾರಿಗಳನ್ನು ಸೇವಿಸಬಹುದು. ಕಾರ್ತಿಕದಲ್ಲಿ ದ್ವಿದಳ ಧಾನ್ಯ/ಬಹುಬೀಜ ವಸ್ತುಗಳು ನಿಷೇಧ. ಬಹುಬೀಜವೆಂದರೆ ಒಂದಕ್ಕಿಂತ ಹೆಚ್ಚು ಬೀಜವಿರುವ ಯಾವುದೇ ವಸ್ತು. ಆದರೆ ನೆಲದ ಅಡಿಯಲ್ಲಿ ಬೆಳೆಯುವ ಅಂದರೆ ಗೆಡ್ಡೆ, ಗೆಣಸು ಹಾಗೂ ಶ್ರಾವಣದಲ್ಲಿ ಬಳಸಬಹುದಾದ ಎಲ್ಲಾ ವಸ್ತುಗಳನ್ನು ಕಾರ್ತಿಕದಲ್ಲಿ ಉಪಯೋಗಿಸಬಹುದು. ದೇಶ, ಕಾಲಕ್ಕನುಗುಣವಾಗಿ ಕೆಲವೊಂದು ವಸ್ತುಗಳ ಉಪಯೋಗದಲ್ಲಿ ವ್ಯತ್ಯಾಸ ಕಾಣಬಹುದು. ಇದಕ್ಕೆ ಶಾಸ್ತ್ರಕಾರರು ವಿಭಿನ್ನ ರೀತಿಯಲ್ಲಿ ಆಹಾರ ನಿಯಮಗಳನ್ನು ವ್ಯಾಖ್ಯಾನಿಸಿರುವುದೇ ಕಾರಣ.


ಚಾತುರ್ಮಾಸ್ಯ ವ್ರತವೆಂಬುದು 'ಅಯಾಚಿತ ವ್ರತ'– ಕಾರಣವೇ ಬಾವಿ, ಕೆರೆ, ಧರ್ಮಶಾಲೆಗಳನ್ನು ಕಟ್ಟಿಸಿದ ಪುಣ್ಯಕ್ಕೆ ನಾವು ಭಾಜನರು ಎಂಬುದು ಶಾಸ್ತ್ರ ಪ್ರಣೀತ. ಒಟ್ಟಿನಲ್ಲಿ ಕಟ್ಟುನಿಟ್ಟಿನ ಆಹಾರ ನಿಯಮದಿಂದಾಗಿ ನಾಲಗೆಯ ಚಾಪಲ್ಯವು ಸ್ಥಿಮಿತಗೊಳ್ಳುವುದರಿಂದ ಶಾರೀರಿಕ ಚಾಪಲ್ಯವೂ ಕೂಡಾ ನಮ್ಮ ಹಿಡಿತದಲ್ಲಿದ್ದು ನಮ್ಮ ಮನಸ್ಸು ಮೃದುವಾಗುವುದು. ಮೃದುತ್ವಕ್ಕೆ ಹೀರಿಕೊಳ್ಳುವ ಗುಣವಿರುವುದರಿಂದ ಒಳ್ಳೆಯ ವಿಚಾರಗಳನ್ನು ಉತ್ತೇಜಕಗಳನ್ನು ನಮ್ಮ ಮನಸ್ಸು ಗ್ರಹಿಸಲು ಸಾಧ್ಯವಾಗುವುದರ ಜೊತೆಗೆ ಏಕಾಗ್ರತೆ ಸಿದ್ಧಿಸುವುದು.

ಸಮರ್ಥನೆಯೇನೆಂದರೆ, ಆಹಾರ ವೈದ್ಯರ ಅಂಬೋಣದಂತೆ ಶರೀರಕ್ಕೆ ಉತ್ತಮವಾಗಿದ್ದರೂ, ಮನಸ್ಸಿಗೆ ಹಿತವಲ್ಲ ಉದಾ : ನೀರುಳ್ಳಿ, ಬೆಳ್ಳುಳ್ಳಿ ಇತ್ಯಾದಿ. ಅಂತೆಯೇ ಅಶ್ವಿನದಲ್ಲಿ ಆಕಳ ಹಾಲು ಆರೋಗ್ಯದ ದೃಷ್ಟಿಯಿಂದ ಸಮರ್ಥನೀಯವಲ್ಲ. ಭಾದ್ರಪದದಲ್ಲಿ ಮೊಸರಲ್ಲಿ ಉಷ್ಣದ ಅಂಶ ಜಾಸ್ತಿ. ಹೀಗೆ ಶಾಸಕಾರರು ಆಯುರ್ವೇದ ಶಾಸ್ತ್ರ ಪ್ರಣೀತದಂತೆ ನಿಷೇಧವನ್ನು ಹೇರಿರುವುದು ವೈಜ್ಞಾನಿಕವೆನಿಸುತ್ತದೆ. ಎಲ್ಲಾ ವ್ರತ ನಿಯಮಗಳನ್ನು ಮೂಢನಂಬಿಕೆಯೆಂಬ ಪೂರ್ವಾಗ್ರಹದಲ್ಲಿ ನೋಡುವುದರ ಬದಲು ಅದರಲ್ಲಿರುವ ಧನಾತ್ಮಕ ವಿಚಾರಗಳ ಕೂಲಂಕುಷ ಅವಲೋಕನ ಅಗತ್ಯ.

*(ಸಂಗ್ರಹ)*

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಇದರ ಆಶ್ರಯದಲ್ಲಿ**



## ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ



**ನಮ್ಮ ಸಮಾಜದ ಆಸಕ್ತ ವಿದ್ಯಾರ್ಥಿಗಳಿಗೆ**

**ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆಯನ್ನು**

ಅಕ್ಟೋಬರ್ ತಿಂಗಳಲ್ಲಿ ನಡೆಯುವ

**'ನಾಡಹಬ್ಬ' (2014)**ದಂದು ಏರ್ಪಡಿಸಲಾಗಿದೆ.

**ಸ್ಪರ್ಧೆಯು ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಇರುತ್ತದೆ.**



| | | | |
|---|---|---|---|
| ಜೂನಿಯರ್ ವಿಭಾಗ | : 9ರಿಂದ 15 ವರ್ಷ | | |
| ಸೀನಿಯರ್ ವಿಭಾಗ | : 16ರಿಂದ 20 ವರ್ಷ | | |
| ಜೂನಿಯರ್ ವಿಭಾಗ | : ಪ್ರಥಮ ಬಹುಮಾನ | – ರೂ. | 750–00 |
| | ದ್ವಿತೀಯ ಬಹುಮಾನ | – ರೂ. | 500–00 |
| ಸೀನಿಯರ್ ವಿಭಾಗ | : ಪ್ರಥಮ ಬಹುಮಾನ | – ರೂ. | 1000–00 |
| | ದ್ವಿತೀಯ ಬಹುಮಾನ | – ರೂ. | 750–00 |

**ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಿಗೆ**
**ಕೆಳಗಿನ ನಿಯಮಗಳು ಅನ್ವಯಿಸುತ್ತದೆ.**



1. ಸ್ಪರ್ಧಿಯ ಹೆಸರು ಮತ್ತು ರಕ್ಷಕರ ವಿಳಾಸ
2. ಸಂಗೀತ ಶಾಲೆ / ಗುರುಗಳ ಹೆಸರು ಮತ್ತು ವಿಳಾಸ
3. ವಯಸ್ಸಿನ ದೃಢೀಕರಣ ಪತ್ರ (ಪರಿಶೀಲಿಸಿ ಹಿಂದಿರುಗಿಸಲಾಗುವುದು).
4. ಶ್ರುತಿಯ ಉಪಕರಣಗಳನ್ನು ಸ್ಪರ್ಧಿಗಳೇ ತರತಕ್ಕದ್ದು.



**ವಿಷಯ :**

**ಜೂನಿಯರ್ ವಿಭಾಗ**

ಒಂದು ವರ್ಣ, ಒಂದು ಕೀರ್ತನೆ
ತ್ಯಾಗರಾಜರ ಅಥವಾ ದೀಕ್ಷಿತರ ಅಥವಾ ಶ್ಯಾಮಾ ಶಾಸ್ತ್ರಿಗಳ ರಚನೆ
ಒಂದು ದೇವರನಾಮ **(ಒಟ್ಟು ಕಾಲಾವಕಾಶ – 8 ನಿಮಿಷ)**

**ಸೀನಿಯರ್ ವಿಭಾಗ**

ಒಂದು ಅಟ ತಾಳ ವರ್ಣ, ತ್ಯಾಗರಾಜರ ಅಥವಾ ದೀಕ್ಷಿತರ
ಅಥವಾ ಶ್ಯಾಮಾ ಶಾಸ್ತ್ರಿಗಳ ಒಂದು ಕೀರ್ತನೆ – ರಾಗಾಲಾಪನೆ,
ನೆರವಲ್, ಕಲ್ಪನಾಸ್ವರಪ್ರಸ್ತಾರ, ಮುಕ್ತಾಯದೊಡನೆ ಒಂದು ದೇವರನಾಮ
ಅಥವಾ ಒಂದು ತಿಲ್ಲಾನ **(ಒಟ್ಟು ಕಾಲಾವಕಾಶ – 16 ನಿಮಿಷ)**

*ಸ್ಪರ್ಧಿಗಳು ತಮ್ಮ ಹೆಸರನ್ನು ಸಾಕಷ್ಟು ಮುಂಚಿತವಾಗಿ ನೋಂದಾಯಿಸಿ ಸಹಕರಿಸಿ.*

**ಸ್ಪರ್ಧೆಯ ನಿಯಮ ಮತ್ತು ವಿವರಗಳಿಗೆ**
**ಶ್ರೀ ಪಿ. ಶ್ರೀಕಾಂತ ರಾವ್ (9343361618) ಇವರನ್ನು ಸಂಪರ್ಕಿಸುವುದು.**

ಸ್ಪರ್ಧೆಯ ಪ್ರಾಯೋಜಕರು : **ಶ್ರೀ ಕೂಡ್ಲು ವೇಣುಗೋಪಾಲ ಶ್ಯಾನುಭೋಗ್**

## ಒಂದೇ ಗುರಿ

ವಿದ್ಯಾರ್ಥಿಗಳಿಗೆ ಅಧ್ಯಾಪಕರನು ಅಪಹಾಸ್ಯ ಮಾಡುವುದೊಂದೇ ಗುರಿ
ರಾಜಕಾರಣಿಗಳಿಗೆ ಸಾರಾಯಿ, ನೋಟು ಹಂಚಿ ಓಟು ಕೇಳುವುದು ಒಂದೇ ಗುರಿ
ಅಧಿಕಾರಿಗಳಿಗೆ ಮೇಜಿನಡಿಯಿಂದ ಲಂಚ ಕೇಳುವುದು ಒಂದೇ ಗುರಿ
ವಕೀಲರುಗಳಿಗೆ ಸುಳ್ಳು ವಾದಿಸಿ ಜನರ ದಾರಿ ತಪ್ಪಿಸುವುದೊಂದೇ ಗುರಿ
ಕಾಂಟ್ರಾಕ್ಟರುಗಳಿಗೆ ಮಾಳಿಗೆ ಏರಿಸಿ, ಬೀಳಿಸಿ ಹಾಕುವುದು ಒಂದೇ ಗುರಿ
ವ್ಯಾಪಾರಿಗಳಿಗೆ ಗ್ರಾಹಕರುಗಳನು ಮೋಸ ಮಾಡುವುದು ಒಂದೇ ಗುರಿ.

**ವೀಣಾ ರಾವ್ ಯಂ. ಪಿ., ವಿಟ್ಲ**

(1) ಹಾಲನು ಕದ್ದು ಕುಡಿಯುವ ನಾನು – ನನ್ನ ಹೆಸರೇನು?
(2) ಜೇನುತುಪ್ಪವನು ಕೊಡುವೆನು ನಾನು – ನನ್ನ ಹೆಸರೇನು?
(3) ಬೆಳಗ್ಗೆ ರಾತ್ರಿ ಮನೆಯನು ಕಾಯುವ ನಾನು – ನನ್ನ ಹೆಸರೇನು?
(4) ಗದ್ದೆಯನ್ನು ಉಳುವೆನು ನಾನು – ನನ್ನ ಹೆಸರೇನು?

**ಅಪೂರ್ವ ರಾವ್ ಎಂ. ಎಸ್., ವಿಟ್ಲ**

ಉತ್ತರ : (1) ಬೆಕ್ಕು (2) ಜೇನು (3) ನಾಯಿ (4) ಎತ್ತು

## ಅಂದು – ಇಂದು



ಅಂದು ಮುತ್ತು ರತ್ನಗಳನು
ಬೀದಿಯಲ್ಲಿ ಮಾರುತ್ತಿದ್ದರು.
ಇಂದು 'ರತ್ನ' ಮುತ್ತುಗಳನು
ಬೀದಿಯಲ್ಲೆ ಮಾರುತ್ತಿರುವಳು.

**– ಅನುಜಾತೆ**

## ಹೋಳಿ (ವನಿತ – ೧೯೮೬)



ಕಾಮದಹನದ ದಿನದಿ
ಉರಿವ ಜ್ವಾಲೆಯ ಮುಂದೆ
ಕುಣಿದ ಮತ್ತಿನ ಮಂದೆ
ಕಾಮನನು ಸುಡುವ ಬದಲಾಗಿ
ಸುಟ್ಟರಾ ರತಿಯ–ಗರತಿಯ
ಕಾಮದಾಹದಲಿ.

**– ಅನುಜಾತೆ**

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ


**ಋಕ್ ಸಂಹಿತಾ ಯಾಗ ಸಮಿತಿ**

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ**

**ಉದಯಾದ್ರಿ ಮಠ, ಪಡುಬಿದ್ರೆ**


ಮಾನ್ಯರೇ,

ಸಮಸ್ತ ಸಮಾಜ ಬಾಂಧವರ ಶ್ರೇಯೋಭಿವೃದ್ಧಿಯ ಸಂಕಲ್ಪದಲ್ಲಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಉದಯಾದ್ರಿ ಮಠ, ಪಡುಬಿದ್ರೆಯಲ್ಲಿ ದಿನಾಂಕ 26-10-2014ರಿಂದ 02-11-2014ರ ವರೆಗೆ ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣಾನುಗ್ರಹದೊಂದಿಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಋಕ್ ಸಂಹಿತಾ ಯಾಗವನ್ನು ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ನಡೆಸುವುದೆಂದು ನಿಶ್ಚಯಿಸಲಾಗಿದೆ. ಇದೇ ಸಂದರ್ಭದಲ್ಲಿ ಸಮಾಜದ ಎಲ್ಲಾ ವೈದಿಕರನ್ನು ಸೇರಿಸಿಕೊಂಡು ಶ್ರೀ ಮಹಾಗಣಪತಿ ಹೋಮ ಮುಂತಾದ ಪಂಚಾಯತನ ದೇವತೆಗಳ ಸಂಬಂಧಿ ಹೋಮಗಳನ್ನು ನಿತ್ಯ ನಡೆಸುವುದೆಂದು ನಿರ್ಧರಿಸಲಾಗಿದೆ.

ಪ್ರಥಮ ದಿನ ಪರಮಪೂಜ್ಯ ಶ್ರೀ ಶ್ರೀ ಮಾಧವಶ್ರಮ ಸ್ವಾಮಿಗಳ ದಿವ್ಯಉಪಸ್ಥಿತಿಯಲ್ಲಿ ವೈದಿಕ ಸಮ್ಮೇಳನ ಹಾಗೂ ಕೊನೆಯ ದಿನ ಶ್ರೀ ಶ್ರೀ ಶಂಕರ ಭಾರತೀ ಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ ಯಾಗ ಪೂರ್ಣಾಹುತಿ ಹಾಗೂ ಸಮಾರೋಪ ಸಭೆ ನಡೆಯಲಿದೆ. ಇದಲ್ಲದೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ.

**ಹೆಚ್ಚಿನ ಮಾಹಿತಿಗಾಗಿ**

| **ಎಮ್. ಆರ್. ವಾಸುದೇವ** | **ಕರುಣ್ ರಾವ್ ಬೆಳ್ಳೆ** | **ಸುಧಾಕರ್ ಬೆಳ್ಳೆ** |
|---|---|---|
| ಅಧ್ಯಕ್ಷರು | ಕಾರ್ಯದರ್ಶಿ | ಖಜಾಂಚಿ |
| 9448125412 | 9243309120 | 9845193103 |



ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಒಬ್ಬ ಕೈದಿ ಸೆರೆಮನೆಗೆ ಬಂದ. ಹಾಗೆ ಬಂದ ತಕ್ಷಣವೇ, ಇಡೀ ಸೆರೆಮನೆ ಅವನು ದೇವರಿಗೆ ಸಲ್ಲಿಸಿದ ಪ್ರಾರ್ಥನೆಯನ್ನು ಮಾರ್ಧನಿಗೈದಿತು. ಬೆಳಗು ಹರಿಯುವ ಮುನ್ನ, ಅವನ ಪೂಜೆ ಮತ್ತು ಪ್ರಾರ್ಥನೆ ಶುರುವಾಗುತ್ತಿದ್ದವು. ದೇವರ ಬಗ್ಗೆ ಅವನ ಪ್ರೀತಿಗೆ ಎಲ್ಲೆ ಇರಲಿಲ್ಲ. ಅವನು ಪ್ರಾರ್ಥಿಸುವಾಗ, ತಡೆಯಿಲ್ಲದ ಕಣ್ಣೀರಧಾರೆ ಹರಿಯುತ್ತಿತ್ತು. ಅವನ ಕಣ್ಣುಗಳಿಂದ, ಬೇರ್ಪಡುವುದರಿಂದಾದ ಒಂದು ಭಾವ ಮತ್ತು ಅವನಿಗಿದ್ದ ದೇವರ ಮೇಲಿನ ಪ್ರೀತಿ ಅವನ ಪ್ರತಿಯೊಂದು ಲಯಬದ್ಧ ಮಾತುಗಳಲ್ಲಿತ್ತು. ಅವನು ದೈವಭಕ್ತನಾಗಿದ್ದನು. ಬಹಳ ಬೇಗ ಇತರ ಕೈದಿಗಳೂ ಅವನ ಅನುಯಾಯಿಗಳಾದರು. ಸೆರೆಮನೆಯ ಅಧೀಕ್ಷಕ ಮತ್ತು ಇತರೆ ಅಧಿಕಾರಿಗಳು ಅವನಿಗೆ ಗೌರವ ತೋರಿಸಲಾರಂಭಿಸಿದರು. ಅವನು ದಿನಂಪ್ರತಿ ಸಲ್ಲಿಸುತ್ತಿದ್ದ ಪ್ರಾರ್ಥನೆ ಇಡೀ ದಿನ ಮತ್ತು ರಾತ್ರಿಯವರೆಗೂ ವಿಸ್ತರಿಸಿತ್ತು. ಅವನ ತುಟಿಗಳು ಉಚ್ಚರಿಸುತ್ತಿದ್ದವು, "ರಾಮ್, ರಾಮ್", ಅವನು ನಿಂತರೂ, ಕುಳಿತರೂ ಅಥವಾ ನಡೆದಾಡುವಾಗಲೂ, ಜಪಮಾಲೆಯಲ್ಲಿನ ಮಣಿಗಳು ಯಾವಾಗಲೂ ಅವನ ಕೈಯಲ್ಲಿ ತಿರುಗುತ್ತಿದ್ದವು. ಅವನು ಹೊದ್ದಿರುತ್ತಿದ್ದ ಶಾಲಿನ ಮೇಲೂ, "ರಾಮ್, ರಾಮ್" ಎಂದೇ ಮುದ್ರಿಸಲಾಗಿತ್ತು.

ಸೆರೆಮನೆಯ ಅಧೀಕ್ಷಕ ತನಿಖೆಗೆ ಬಂದಾಗಲೆಲ್ಲ, ಆ ಮನುಷ್ಯ ಒಂದಲ್ಲ ಒಂದು ರೀತಿಯ ಭಕ್ತಿಯಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಿದ. ಆದರೆ ಒಂದು ದಿನ, ಅವನು ಬಂದಾಗ, ಹೊತ್ತು ಮೂಡಿ ಬಹಳ ಹೊತ್ತಾಗಿದ್ದರೂ, ಅವನು ನಿರಾಳವಾಗಿ ನಿದ್ದೆಯಲ್ಲಿರುವುದನ್ನು ನೋಡಿದ. "ರಾಮ್, ರಾಮ್" ಎಂದು ಮುದ್ರಿಸಿದ್ದ ಅವನ ಶಾಲು ಮತ್ತು ಜಪಮಣಿಮಾಲೆ ಒಂದು ಮೂಲೆಯಲ್ಲೆ ಬಿದ್ದಿದ್ದವು. ಬಹುಶಃ ಅವನಿಗೆ ಏನಾದರೂ ಅನಾರೋಗ್ಯವಾಗಿರಬಹುದೆಂದು ಅಧೀಕ್ಷಕ ಭಾವಿಸಿದ. ಬೇರೆ ಕೈದಿಗಳನ್ನು ವಿಚಾರಿಸಿದಾಗ ಆ ಕೈದಿಯು ಆರೋಗ್ಯವಾಗಿರುವನೆಂದೂ, ಆದರೆ ಹಿಂದಿನ ದಿನದ ಸಂಜೆಯಿಂದ ಅವನು ಪ್ರಾರ್ಥನೆ ಮಾಡುವುದನ್ನು ನಿಲ್ಲಿಸಿದ್ದಾನೆಂದು ಮತ್ತು ಅದಕ್ಕೆ ಕಾರಣ ಯಾರಿಗೂ ತಿಳಿದಿಲ್ಲವೆಂದು.

ಜೈಲಿನ ಅಧೀಕ್ಷಕ ಅವನನ್ನು ಎಚ್ಚರಿಸಿದ ಮತ್ತು ಕೇಳಿದ, "ಹೊತ್ತು ಮೂಡಿ ನೆತ್ತಿ ಮೇಲೆ ಬಂದಿದೆ. ನೀನು ಎಂದಿನಂತೆ ಬೆಳಗ್ಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡುವುದಿಲ್ಲವೇ?"

ಆ ಕೈದಿ ಉತ್ತರಿಸಿದ, "ಪೂಜೆ ಮತ್ತು ಪ್ರಾರ್ಥನೆ? ಯಾತಕ್ಕಾಗಿ ಪೂಜೆ ಮತ್ತು ಪ್ರಾರ್ಥನೆ? ನಿನ್ನೆ ದಿನ ಮನೆಯಿಂದ ನನಗೆ ಪತ್ರ ಬಂದಿದೆ. ನನಗೆ ಈ ಹಿಂದೆ ವಿಧಿಸಲಾಗಿದ್ದ ಮರಣದಂಡನೆಯನ್ನು ಏಳು ವರ್ಷಗಳ ಕಾರಾಗೃಹ ವಾಸವನ್ನಾಗಿ ಪರಿವರ್ತಿಸಲಾಗಿದೆಯಂತೆ. ನಾನು ದೇವರಿಂದ ಏನನ್ನು ಬಯಸಿದ್ದೆನೋ ಅದನ್ನು ಅವನು ಕರುಣಿಸಿದ್ದಾನೆ. ಇಷ್ಟಾದ ನಂತರ ಆ ಬಡಪಾಯಿ ದೇವರನ್ನು ಗೋಳು ಹೊಯ್ದುಕೊಳ್ಳುವುದರಲ್ಲಿ ಏನಿದೆ ಅರ್ಥ? ಮತ್ತಿನ್ನಾವ ಪುರುಷಾರ್ಥಕ್ಕೆ ಪ್ರಾರ್ಥನೆ? ●

**ಸರ್ವಸ್ವವನ್ನು ಸಮಾಜಕ್ಕೆ ಅರ್ಪಿಸಿ,**
**ಸಮಾಜದಿಂದ ಸಿಕ್ಕುವುದನ್ನು**
**ಪ್ರಸಾದರೂಪದಲ್ಲಿ ಸ್ವೀಕರಿಸುವುದೇ ಭಕ್ತಿ.**




## LIFEBUOY ಎಲ್ಲಿದೆಯೋ ಅಲ್ಲಿದೆ ಆರೋಗ್ಯ

ಅದೊಂದು ಚಿಕ್ಕ ಊರು. ಅಲ್ಲೊಂದು ಚಿಕ್ಕ ಕಿರಾಣಿ ಅಂಗಡಿ. ಆ ಅಂಗಡಿ ಹೊರಗಡೆ ಒಂದು ತುಂಡುಬೆಂಚು. ಆ ಊರಿನ ಹಿರಿಯರೊಬ್ಬರು ಪ್ರತಿದಿನ ಸಂಜೆ ಆ ಅಂಗಡಿಗೆ ಭೇಟಿ ನೀಡುತ್ತಿದ್ದರು. ಆ ತುಂಡು ಬೆಂಚಿನಲ್ಲಿ ಸ್ವಲ್ಪ ಹೊತ್ತು ಕೆಮ್ಮುತ್ತಾ ಕುಳಿತಿದ್ದು ಬಳಿಕ ಮನೆಗೆ ತೆರಳುತ್ತಿದ್ದರು. ಇದು ಅವರ ಪ್ರತಿದಿನದ ರೂಢಿಯಾಗಿತ್ತು. ಅವರಾದರೋ ಆ ಅಂಗಡಿಯಿಂದ ಏನನ್ನೂ ಕೊಳ್ಳುತ್ತಿರಲಿಲ್ಲ.

ಬಹಳ ದಿನಗಳ ಬಳಿಕ ಅಂಗಡಿ ಮ್ಹಾಲೀಕನಿಗೆ ಸಣ್ಣ ಸಂಶಯವೊಂದು ತಲೆದೋರಿತು. "ಅಜ್ಜ ನೀವೇನೂ ಖರೀದಿಸುವುದಿಲ್ಲ, ಅದೇ ಬೆಂಚಿನಲ್ಲಿ, ಅದೇ ಜಾಗದಲ್ಲಿ ನಾನು ಸಾಬೂನುಗಳನ್ನು ಪೇರಿಸಿಟ್ಟ ಜಾಗದಲ್ಲಿ, ಅದರಲ್ಲೂ Lifebuoy ಸಾಬೂನು ಇರುವ ಜಾಗದಲ್ಲಿ ಅದನ್ನೇ ನೋಡುತ್ತಾ ಕುಳಿತಿರುತ್ತೀರಿ. ನಿಮಗೇನಾದರೂ ಸಾಬೂನಿನ ಆವಶ್ಯಕತೆ ಇದ್ದರೆ ಹಣ ಕೊಡದಿದ್ದರೂ ಪರವಾಗಿಲ್ಲ ನಾನು ಕೊಡುತ್ತೇನೆ" ಎಂದ.

ಹಾಗೇನಿಲ್ಲ. ನಾನು ಇತ್ತೀಚೆಗೆ ಬಹಳ ಜಾಹೀರಾತುಗಳು ಹಾಗೂ ಗೋಡೆಬರಹಗಳಲ್ಲಿ ನೋಡಿದ್ದೇನೆ, "Lifebuoy ಎಲ್ಲಿದೆಯೋ ಅಲ್ಲಿದೆ ಆರೋಗ್ಯ" ಅಂತ ಬರೆದಿತ್ತು. ನನಗೆ ಬಹಳ ದಿನಗಳಿಂದ ಒಂದು ಒಣ ಕೆಮ್ಮು ಬಾಧಿಸುತ್ತಿದೆ. ಈಗ ಇಲ್ಲಿ ನಿಮ್ಮ ಅಂಗಡಿಯಲ್ಲಿ Lifebuoy ಸಾಬೂನಿನ ಪಕ್ಕದಲ್ಲಿ ಬಂದು ಕುಳಿತುಕೊಳ್ಳಲು ಪ್ರಾರಂಭಿಸಿದ ಮೇಲೆ ನನ್ನ ಕೆಮ್ಮು ಒಂದಷ್ಟು ವಾಸಿಯಾಗಿದೆ ಎಂದರು. ●



## ಚಿಣ್ಣರ ಆರ್ಟ್ ಗ್ಯಾಲರಿ



ಚಿತ್ರ 1




ಚಿತ್ರ 2




ಅನಘಾ ರಾವ್


ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.



ಅನನ್ಯಾ ರಾವ್




ಕೆ. ನವೀನ ಬೆಳ್ತಂಗಡಿ



ಉಷಾ ಪಿ. ಸುಬ್ರಹ್ಮಣ್ಯ

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**




## ಜ್ಞಾನ – ನುಡಿ

ಮಳೆ ಬಂದಾಗ ಎಲ್ಲ ಹಕ್ಕಿಗಳೂ ಮರದ ಆಶ್ರಯ ಪಡೆಯುತ್ತವೆ. ಆದರೆ ಹದ್ದುಗಳು ಮೋಡದಿಂದಲೂ ಮೇಲಕ್ಕೆ ಹೋಗಿ ಹಾರಾಡುತ್ತವೆ. ಸಮಸ್ಯೆ ಎಲ್ಲರಿಗೂ ಇದೆ. ಆದರೆ ಅದನ್ನು ಹೇಗೆ ಎದುರಿಸುತ್ತೀರಿ ಎನ್ನುವುದು ಮುಖ್ಯ.

**ಡಾ. ಎ.ಪಿ.ಜೆ. ಅಬ್ದುಲ್ ಕಲಾಂ**

## ಜ್ಞಾನ – ನಗೆ

ಚಿತ್ರಕಲೆ ಪ್ರದರ್ಶನವೊಂದರಲ್ಲಿ ಒಂದು ಚಿತ್ರವನ್ನು ವೀಕ್ಷಿಸುತ್ತಿದ್ದ ಒಬ್ಬ ವ್ಯಕ್ತಿ ತನ್ನ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿಯಲ್ಲಿ ಕೇಳಿದ :

'ಇಲ್ಲಿ ತೂಗುಹಾಕಿರುವ ಚಿತ್ರ ಸೂರ್ಯೋದಯದ್ದೋ ಅಥವಾ ಸೂರ್ಯಾಸ್ತದ್ದೋ?'

ಪಕ್ಕದವನು ಖಚಿತ ಧ್ವನಿಯಲ್ಲಿ ಉತ್ತರಿಸಿದ; ಬಹುಶಃ ಅದು ಸೂರ್ಯಾಸ್ತದ್ದೇ ಇರಬೇಕು. ಏಕೆಂದರೆ ಈ ಕಲಾವಿದ ದಿನಾ ಏಳುವುದೇ ಹತ್ತು ಗಂಟೆಗೆ!

## ಜ್ಞಾನ – ಗಾದೆ

ಕೋಪೊಟ್ ಕುದಿಪುನಾಯಗ್ ತೊಂದರೆ ಹೆಚ್ಚ
ಕೋಪನೇ ಪೂರಾ ಹಾಳ್ ಕೆಲ್ಸಗ್ ಮೂಲ
ಕೋಪನ್ ಗೆಂದ್ಂಡ ಲೋಕೊನ್ ಗೆಂದಿಲೆಕ್ಕ

## ಜ್ಞಾನ – ವಿಸ್ಮಯ

ಜಪಾನಿನ ಈ ಹೋಟೆಲ್‌ನಲ್ಲಿ 'ಬೋಡು ಮಂಡೆಯವರು ಅತ್ಯಂತ ಸುಂದರರು' ಎಂಬ ಫಲಕ ತಗುಲಿಸಿದ್ದಾರಂತೆ. ಬೊಕ್ಕ ತಲೆಯವರಿಗೆ ಖಾದ್ಯಗಳ ಮೇಲೆ ವಿಶೇಷ ರಿಯಾಯ್ತಿ ಬೇರೆ. ಬೊಕ್ಕ ತಲೆಯವರು ವಿಗ್ ಕಳಚಿಟ್ಟು ಬೇಕಾಬಿಟ್ಟಿ ಬೋಳು ಮಂಡೆ ಪ್ರದರ್ಶಿಸಿ ಖುಷಿ ಪಡಬಹುದು.

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur*
*Printed at : Rajesh Power Press, Darbe - 574 202, Puttur, D. K.*